ಧರ್ಮಾಂಬುಧಿ ಮತ್ತು ಕಂಪಾಂಬುಧಿ ಕೆರೆಗಳೂ ಸೇರಿರುತ್ತವೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—'ಕೆರೆ' ಎಂದು ಹೆಸರಿರತಕ್ಕವುಗಳೆಲ್ಲಾ ಸೇರುತ್ತವೆ.

ಶ್ರೀ ಜಿ. ಬಕಪ್ಪ.—ಎಕ್ಸ್‌ಪೋಸ್ ಸೆನ್ಸನ್ನು ರೈತರು ಕೊಡುವುದಕ್ಕೆ ಸಿದ್ಧವಾಗಿದ್ದಾರೆ, ಈ ಸಾಲಾಬಾದು ಕಾಂಗಾರಿಯನ್ನು ಸರ್ಕಾರದವರೇ ನಡೆಸಿಕೊಂಡು ಬರಬೇಕೆಂದು ಈ ಸಭೆಯಲ್ಲೇ ಕೇಳಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಚಾರ ನನಗೆ ಜ್ಞಾಪಕವಿಲ್ಲ. ಸಭೆಯ ಅಭಿಪ್ರಾಯ ಆ ರೀತಿಯಿದ್ದರೆ ಆಲೋಚನೆ ಮಾಡೋಣ.

Mr. SPEAKER.—Next question.

Sri H. M. CHANNABASAPPA.—I would like to submit that questions pertaining to Sri Siddaveerappa and also to me may kindly be taken up so that I may go to the other House.

Electricity to I.P. sets in Hariyabbe and other villages.

Q.—199. Sri V. MASIYAPPA (Hiriyur).—

Will the Government be pleased to state :—

the action taken by Government on the assurance given by them in the last session regarding supply of electricity for I.P sets to Hariyabbe, Sravanagere, Khandenahally, Halagadaddi, Ikkanur and Kundalagura for which estimates have been sent by Hiriyur and Challakere Senior Operators ?

A.—Sri H. M. CHANNABASAPPA (Minister for Industries).—

Hariyabbe :—An estimate for power supply to 35 I.P. sets has recently been finalised and is under consideration.

Sravanagere :—An estimate for arranging power supply to 19 I.P. sets has recently been finalised and is under scrutiny.

Khandenahalli :—An estimate for power supply to 21 I.P. sets at Khandenahalli and a few other villages nearby for Rs. 1·25 lakhs has been prepared and will be finalised shortly.

Ikkanur and Kundalagura :—A combined estimate for power supply to 23 I.P. sets at these two places has been prepared for Rs. 1·1 lakhs and the same will be finalised shortly.

Halagadaddi :—An estimate for arranging power supply to 20 I.P. sets at Halagadaddi and Maddihalli has been prepared for Rs. 84,500 and is under scrutiny.

ಶ್ರೀ ವಿ. ಮಾಸಿಯಪ್ಪ.—ಈ ಅಂದಾಜು ತಯಾರಾಗಿ ಎಷ್ಟು ವರ್ಷಗಳಾಯಿತು?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಅಂದಾಜುಗಳಲ್ಲಿ ಈಗತಾನೆ ಕೆಲವು ಫೈನಲೈಜ್ ಆಗಿ ಸರ್ಕಾರದ ಮುಂದೆ ಬಂದಿವೆ. ಮತ್ತೆ ಕೆಲವು ಇಂಜಿನಿಯರ್ ಅವರ ಪರಿಶೀಲನೆಯಲ್ಲಿವೆ.

ಶ್ರೀ ವಿ. ಮಾಸಿಯಪ್ಪ.—ಈ ಪೈಕಿ 70-80 ಜನರಾಗಲೇ ಆಯಿಲ್ ಎಂಜಿನುಗಳನ್ನು ಇಟ್ಟುಕೊಂಡು ತುಂಬ ತೊಂದರೆ ಪಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಚಾರವನ್ನು ಹೋದ ಅಧಿವೇಶನದ ಕಾಲದಲ್ಲಿ ಮಾನ್ಯ ಸದಸ್ಯರಾದ ತಾವೇ ಸರ್ಕಾರದವರ ಗಮನಕ್ಕೆ ತಂದಿದ್ದೀರಿ. ಆ ಹರಿಯಬ್ಬೆಯ ಅಂದಾಜು ಇವೊತ್ತೋ ನಾಳೆಯೋ ಮಂಜೂರಾಗುವುದರಲ್ಲಿದೆ. ಇನ್ನು ಉಳಿದ ಕಡೆಗಳಲ್ಲಿ ಸರ್ಕಾರದವರ ನಿರೀಕ್ಷಿಸಿರುವ ಮಟ್ಟಕ್ಕೆ ಉತ್ಪತ್ತಿ ಬರುವುದಾದರೆ ಅವುಗಳನ್ನೂ ಕೂಡ ಬೇಗ ಮಂಜೂರು ಮಾಡುತ್ತೇವೆ.

Electricity (supply to I.P. sets in Murudala Betta and Konde Thimmanahalli.

Q.—547. Sri MALI MARIYAPPA (Pavagada).—

Will the Government be pleased to state :—

(*a*) whether estimate for supply of power to Murudala Betta and Konde Thimmanahalli (irrigation wells) is prepared ;

(*b*) the progress so far made ?

A.—Sri H. M. CHANNABASAPPA (Minister for Industries).—

(*a*) No.

(*b*) Does not arise in view of answer to item (*a*).

ಶ್ರೀ ಮಾಲಿ ಮರಿಯಪ್ಪ.—ತಾವು (ಎ)ಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ. ಹೋದ ಸಾಲಿನ ಬಜೆಟ್ಟಿನಲ್ಲಿ ಈಗ ನಾನು ಕೇಳಿರತಕ್ಕ ಎರಡು ಗ್ರಾಮಗಳು ಮತ್ತು ಹಾರನಹಳ್ಳಿ ಒಟ್ಟು ಈ ಮೂರು ಗ್ರಾಮಗಳ ಅಂದಾಜು ಮಂಜೂರಾಗಿ ಆ ಬಗ್ಗೆ ಹಣ ಕೂಡ ಒದಗಿಸಿಲ್ಲವೇ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಟೀಸ್.

ಶ್ರೀ ಮಾಲಿ ಮರಿಯಪ್ಪ.—ಆದರೆ ತಾವು ಈಗಲಾದರೂ ಮತ್ತೊಮ್ಮೆ ಆ ಬಜೆಟ್ಟನ್ನು ಪರಿಶೀಲನೆ ಮಾಡಲಾಗುತ್ತದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಕೇಳಿದರೆ ಮಾಡೋಣ.